**PW-2:** ಚಿಕ್ಕ ಅಡಿವಣ್ಣ

ದಿನಾಂಕಃ **20.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1. ವಾದಿ ನನ್ನ ಸಂಬಂಧಿ. ಒಂದೇ ಜನಾಂದವರು. ವಾದಿ ಸುರೇಶ್ ರವರ ಪತ್ನಿ ನನ್ನ ಮಗಳು ಎಂದರೆ ಸರಿ. ವಾದಿಯ ಅಕ್ಕನನ್ನು ನಾನು ವಿವಾಹವಾಗಿದ್ದೇನೆ ಎಂದರೆ ಸರಿ. ನೀವು ವಾದಿಯ ಮಾವನಾಗಿದ್ದು ಆ ಕಾರಣ ಸಾಕ್ಷಿ ನುಡಿಯಲು ಬಂದಿದ್ದೀರಿ ಎಂದರೆ ಸಾಕ್ಷಿಯು ಸಾಕ್ಷಿ ಹಾಕಿದ್ದೇನೆ ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಬೀಸಪ್ಪ ರವರು ಪೆನುಕೊಂಡ ತಾಲ್ಲೂಕಿನ ತಿಮ್ಮಾಪುರ ಗ್ರಾಮದವರು. ನಮ್ಮದ್ದು ಮುರರಾಯನಹಳ್ಳಿ ಗ್ರಾಮ. ನಮ್ಮ ಮತ್ತು ಪ್ರತಿವಾದಿಯ ಗ್ರಾಮದ ನಡುವೆ 5 ಕಿ.ಮೀ. ಅಂತರವಿದೆ. ವಾದಿ ಈಚಲರೆಡ್ಡಿ ಗ್ರಾಮದವರು. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರದ ವಿಚಾರಗಳು ನನಗೆ ಗೊತ್ತು. ತಿಳುವಳಿಕೆ ಪತ್ರ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನೋಟಿಸು ಕೊಟ್ಟ ವಿಚಾರ ಮತ್ತು ಉತ್ತರ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ.

2. ರಾಮಯ್ಯ ಎಂಬ ಪತ್ರಬರಹಗಾರರ ಬಳಿ 18 ನೇ ಅಕ್ಟೋಬರ್ 2021 ರಂದು ಕರಾರುಪತ್ರ ಬರೆಯಲಾಗಿದೆ. ಅಂದು ಬೆಳಿಗ್ಗೆ ಊರಿನಲ್ಲಿ ಮಾತುಕತೆ ಮಾಡಿದ್ದು ಆ ನಂತರ ಕರಾರುಪತ್ರ ಬರೆದಿರುತ್ತಾರೆ. ಪ್ರತಿವಾದಿಯ ಮನೆಯ ಬಳಿ ಮಾತುಕತೆ ಮಾಡಿದ್ದೇವು. ಮಾತುಕತೆ ಮಾಡಿದ ಸಂದರ್ಭ ವಾದಿ, ಪ್ರತಿವಾದಿ, ನಾನು ಪ್ರತಿವಾದಿ ಮಗ ಗೋವಿಂದಪ್ಪ ಇದ್ದೇವು. ಪ್ರತಿವಾದಿಗೆ 3 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇದ್ದಾನೆ. ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಬೆಳಿಗ್ಗೆ 08.00 ರಿಂದ 10.00 ರ ವರೆಗೂ ಮಾತುಕತೆ ಮಾಡಿ ಮಧ್ಯಾಹ್ನ 03.00 ಗಂಟೆಗೆ ಕರಾರುಪತ್ರ ಮಾಡಿರುತ್ತೇವೆ. ಒಟ್ಟಾರೆಯಾಗಿ 6 ಎಕರೆ ಸ್ವತ್ತಿಗೆ ರೂ. 23 ಲಕ್ಷ ಎಂದು

ಬೆಲೆ ನಿಗದಿ ಮಾಡಿರುತ್ತೇವೆ. ಪಹಣಿ ಪತ್ರಿಕೆಗಳನ್ನು ನೋಡಿ ಸ್ವತ್ತನ್ನು ಖರೀದಿಸಲಾದೆ. ಆ ದಿನ ಪಹಣಿ ಪತ್ರಿಕ ಸರ್ಕಾರಿ ಎಂದು ನಮೂದಾಗಿತ್ತು. ಪಹಣಿಯಲ್ಲಿಯೂ ಸರ್ಕಾರಿ ಎಂದು ನಮೂದಾಗಿತ್ತು. ಛಾಪಾ ಕಾಗದವನ್ನು ಪ್ರತಿವಾದಿಯೇ ತಂದಿರುತ್ತಾರೆ. ಪ್ರತಿವಾದಿಯೇ ಕೋ ಆಪರೇಟಿವ್ ಸೊಸೈಟಿಯಲ್ಲಿ ಬರೆದಿರುತ್ತಾರೆ. ಸ್ಟಾಂಪ್ ಯಂಡ್ ರಾಮಚಂದ್ರ ರವರು ಬಳಿ ಬರೆಯಲಾಗಿದೆ. ಮಲ್ಲಿಕಾರ್ಜುನ ವಕೀಲರ ಕಚೇರಿಯ ಹಿಂಭಾಗದಲ್ಲಿ ಅವರ ಕಚೇರಿ ಇದೆ. ಕರಾರುಪತ್ರದ ವಿಚಾರಗಳು ಗೊತ್ತಿದೆ. ಸರ್ಕಾರಿ ಬಡ ಇದ್ದು ಬೀಸಪ್ಪ ರವರ ಹೆಸರಿಗೆ ಬಂದ ನಂತರ ಬರೆದುಕೊಡಲಾಗುತ್ತದೆ ಎಂದು ಬರೆಯಲಾಗಿದೆ. ಪಹಣಿಯಲ್ಲಿಯೂ ಸರ್ಕಾರಿ ಎಂದು ನಮೂದಾಗಿತ್ತು. ಸರ್ಕಾರಿ ಆಗಿರುವ ಕಾರಣ ಪ್ರತಿವಾದಿ ಮತ್ತು ಮಗನಿಗೆ ಮಾರಾಟ ಮಾಡಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಅಳಿಯ ಕರಾರುಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕರಾರುಪತ್ರದಂತೆ ಹಣವನ್ನು ಪ್ರತಿವಾದಿಗೆ ನೀಡಲಾಗಿದೆ. ಆ ದಿನ ಬೀಸಪ್ಪ ರವರು ಹಾಜರಿರಲಿಲ್ಲ ಎಂದರೆ ಸರಿಯಲ್ಲ.

3. ನಾನು ಮತ್ತು ಸಾಕ್ಷಿದಾರರು ಕರಾರುಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆಃ ನರಸಪ್ಪ ಮತ್ತು ನಾಗಪ್ಪ ರವರ ಜಮೀನು, ಪಶ್ಚಿಮಕ್ಕೆ ಗ್ರಾಮಠಾಣಾ, ಉತ್ತರಕ್ಕೆ ಮಲ್ಲಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ಬೋಡರಹಳ್ಳಿಯ ಗ್ರಾಮಠಾಣಾ ಇರುತ್ತದೆ. ನಾನು ಕರಾರುಪತ್ರವನ್ನು ಓದಿ ಅದರಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನಾವು ಬರೆಸಿದೆ ಕರಾರುಪತ್ರವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಈ ಹಿಂದೆ ನೋಂದಾವಣೆಯಾಗಿರುವ ಪತ್ರದ ನೋಂದಣಿ ಸಂಖ್ಯೆ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಪ್ರತಿವಾದಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಅಳಿಯನಿಗೆ ಸಹಾಯ ಮಾಡಲು ನಮ್ಮ ಊರಿನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕರಾರುಪತ್ರದಲ್ಲಿ ಇರುವ ಸಹಿ ಪ್ರತಿವಾದಿಯದ್ದಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.